ಅ) ಪ್ರಸ್ತುತ ಸಾಲಿನಲ್ಲಿ ಕೃಷ್ಣ ಕೊಳ್ಳದ ಯೋಜನೆಗಳಿಗೆ ೧೮೫.೩೭ ಕೋಟಿ ರೂಪಾಯಿಗಳನ್ನು ಮತ್ತು ಕಾವೇರಿ ಕೊಳ್ಳದ ಯೋಜನೆಗಳಿಗೆ ೧೧೫.೮೭ ಕೋಟಿ ರೂಪಾಯಿಗಳನ್ನು ನಿಗದಿಗೊಳಿಸಲಾಗಿದೆ. ಸಧ್ಯದಲ್ಲಿ ಅಭಿವೃದ್ಧಿ ಮಂಡಳಿಗಳು ಯಾವುದೂ ಇಲ್ಲ,

ಇ) ಉದ್ಭವಿಸುವುದಿಲ್ಲ.

ಈ) ಹೌದು. ರಾಜ್ಯದ ಪ್ರಸ್ತುತ ಹಣ ಕಾಸಿನ ಪರಿಸ್ಥಿತಿಯೇ ಇದಕ್ಕೆ ಕಾರಣ.

ಪ್ರಾಥಮಿಕ ಶಾಲಾ ಉಪಾಧ್ಯಾಯರ ನೇಮಕಾತಿ ಬಗ್ಗೆ.

೫೭. ಶ್ರೀ ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಶಾಲಾ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ.

ಆ) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಉಪಾಧ್ಯಾಯ ನೇಮಕಾತಿ ಸಮಿತಿಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ನೇಮಕ ಮಾಡಲಾಗಿದೆಯೇ ?

ಈ) ಹಾಗಿದ್ದಲ್ಲಿ ಸದರಿ ಸಮಿತಿಗಳು ಕೆಲಸ ಪ್ರಾರಂಭಿಸಿವೆಯೇ ?

ಉ) ಸದರಿ ಸಮಿತಿಗಳನ್ನು ಜಿಲ್ಲಾ ಪರಿಷತ್ ಅಧ್ಯಕ್ಷರು ನೇಮಕ ಮಾಡುವರೋ ? ಅಥವಾ ಸರ್ಕಾರದವರು ನೇಮಕ ಮಾಡುವರೋ ?

ಶ್ರೀ ಬಿ. ಸೋಮಶೇಖರ್(ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ೫೬೦೫

ಆ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಈಗಾಗಲೇ ೧೩ ಜಿಲ್ಲೆಗಳಲ್ಲಿ ಕರೆಯಲಾಗಿದೆ. ಉಳಿದ ಜಿಲ್ಲೆಗಳಲ್ಲಿಯೂ ಅರ್ಜಿಗಳನ್ನು ಕರೆಯಲು ತಿಳಿಸಲಾಗಿದೆ.

ಇ) ಹೌದು.

ಈ) ಹಾಗಿದೆ.

ಉ) ಸರ್ಕಾರದವರು ನೇಮಕ ಮಾಡುತ್ತಾರೆ.

ಕೃಷಿ ಉತ್ಪನ್ನ ಬೆಳೆಗಳಿಗೆ ನ್ಯಾಯ ಬೆಲೆಯನ್ನು ನಿಗದಿ ಪಡಿಸುವುದು.

೫೯. ಶ್ರೀ ಆ ೯. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷಿ ಉತ್ಪನ್ನಗಳಾದ ರಾಗಿ, ಜೋಳ, ಭತ್ತ, ಹತ್ತಿ, ಶೇಂಗಾ, ಮೆಣಸಿನಕಾಯಿ, ಕಬ್ಬು ಇತ್ಯಾದಿಗಳ ಬೆಳೆಗಳಿಗೆ ನ್ಯಾಯ ಬೆಲೆಯನ್ನು ರಾಜ್ಯದಲ್ಲಿ ನಿಗದಿ ಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ? ಹಾಗಿಲ್ಲದಿದ್ದಲ್ಲಿ, ಯಾವಾಗ ನಿಗದಿ ಪಡಿಸಲಾಗುವುದು ?

ಆ) ಕೃಷಿ ಬೆಲೆ ನಿಗದಿ ಪಡಿಸುವ ಆಯೋಗದ ಪ್ರಕಾರ ವಾಸ್ತವಿಕ ಉತ್ಪಾದನಾ ವೆಚ್ಚವೇನು ?

ಶ್ರೀ ಆರ್. ವಿ. ದೇಶಪಾಂಡೆ(ಕೃಷಿ ಸಚಿವರು).—

ಅ) ಕೃಷಿ ಉತ್ಪನ್ನಗಳ ಬೆಂಬಲ ಸಂಗ್ರಹಣ ಬೆಲೆಯನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರ ದೊಡನೆ ಸಮಾಲೋಚಿಸಿ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ನಿಗದಿ ಪಡಿಸುವುದು, ರಾಜ್ಯ ಸರ್ಕಾರವು ಯಾವಾಗಲೂ ಕೃಷಿ ವೆಚ್ಚ ಮತ್ತು ಬೆಲೆ ಆಯೋಗ ಶಿಫಾರಸ್ಸು ಮಾಡಿದ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಿರುತ್ತದೆ.

ಅ) ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು ವಿವಿಧ ಬೆಳೆಗಳ ಉತ್ಪಾದನಾ ವೆಚ್ಚದ ಮಾಹಿತಿಯನ್ನು ಎಲ್ಲಾ ರಾಜ್ಯಗಳಿಂದ ಪಡೆದು, ಸೂಕ್ತ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು. ಈ ಆಯೋಗವು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಪರಿಗಣಿಸಿದ ಉತ್ಪನ್ನ ವೆಚ್ಚದ ಮಾಹಿತಿಯು ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು ರಾಜ್ಯ ಸರ್ಕಾರಕ್ಕೆ ಒದಗಿಸಿದ ವರದಿಯಲ್ಲಿ ಇರುವುದಿಲ್ಲ.

ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಹಂತದ ಬಗ್ಗೆ

೩೨೨. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಹಂತದ ಮೂಲ ಅಂದಾಜು ಮತ್ತು ಖರ್ಚು ಮಾಡಿದ ಹಣ ?

ಆ) ಒಪ್ಪಲಾದ ನಿಯಮಾವಳಿಗಳನ್ನು ಸರ್ಕಾರವು ಪಾಲಿಸದೇ ಇರುವುದರಿಂದ ಎರಡನೇ ಹಂತಕ್ಕೆ ನೆರವು ನೀಡಲು ವಿಶ್ವ ಬ್ಯಾಂಕ್ ನಿರಾಕರಿಸಿರುವುದು ನಿಜವೇ ?

ಇ) ಬಹಳಷ್ಟು ಅವ್ಯವಹಾರದ ಕಾರಣಕ್ಕಾಗಿ ತುಂಡು ಗುತ್ತಿಗೆ ಪದ್ಧತಿಯನ್ನು ಸರ್ಕಾರವು ಆರಂಭಗೊಳಿಸಿರುವುದು ನಿಜವೇ ?

ಈ) ತಪ್ಪು ಅಂದಾಜುಗಳಿಂದಾಗಿ ಯೋಜನೆಯು ವೆಚ್ಚದಲ್ಲಿ ಹೆಚ್ಚಳವಾಗಿರುವುದು ನಿಜವಲ್ಲವೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೭೮ ರಲ್ಲಿ ವಿಶ್ವ ಬ್ಯಾಂಕ್ ನೆರವಿಗೆ ಮುಂದೊಡ್ಡಲಾದ ಕರ್ನಾಟಕ ನೀರಾವರಿ ಯೋಜನೆಯಲ್ಲಿ ಆಳವಡಿಸಲಾದಂತೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟದ ಮೊದಲ ಹಂತದ ಅಂದಾಜು ವೆಚ್ಚ ೧೯೯.೯೩ ಕೋಟಿ ರೂಪಾಯಿಗಳು. ೧೯೭೮ ರಿಂದ ೧೯೮೬ರ ವರೆಗಿನ ವಿಶ್ವ ಬ್ಯಾಂಕ್ ನೆರವಿನ ಅವಧಿಯಲ್ಲಿ ಮೊದಲ ಹಂತಕ್ಕೆ ಆದ ಖರ್ಚು ರೂ. ೩೩೪.೭೪ ಕೋಟಿ.

ಆ) ಎರಡನೇ ಹಂತದ ಯೋಜನೆಯು ಕೇಂದ್ರ ಸರ್ಕಾರದಿಂದ ಅಂಗೀಕಾರ ಪಡೆದಿದ್ದು ವಿಶ್ವ ಬ್ಯಾಂಕ್ ನಿಯೋಗದವರು ಈಗಾಗಲೇ ಹಲವಾರು ಬಾರಿ ರಾಜ್ಯಕ್ಕೆ ಭೇಟಿ ಕೊಟ್ಟು ಮಾತುಕತೆಗಳನ್ನು ನಡೆಸಿದ್ದಾರೆ. ಇನ್ನು ೪-೫ ತಿಂಗಳಲ್ಲಿ ವಿಶ್ವಬ್ಯಾಂಕ್‌ನಿಂದ ಯೋಜನೆಯ ಅಪ್ರೈಸಲ್ ನಡೆಯುವ ನಿರೀಕ್ಷೆ ಇದೆ.

ಇ) ಇಲ್ಲ.

ಈ) ಯೋಜನೆಯ ಅವಧಿಯಲ್ಲಿ ಆದ ದರಗಳ ಹೆಚ್ಚಳ, ನಿರ್ಮಾಣ ಕಾಲದಲ್ಲಿ ಆದ ಕೆಲವು ವಿನ್ಯಾಸಗಳಲ್ಲಿ ಬದಲಾವಣೆ, ಇತ್ಯಾದಿ ಕಾರಣಗಳಿಂದಾಗಿ ಯೋಜನಾ ವೆಚ್ಚದಲ್ಲಿ ಹೆಚ್ಚಳವಾಗಿದೆ.

ಗುಲ್ಬರ್ಗಾ ತಾಲ್ಲೂಕು ಹಾಗರಗುಂಡಗಿ ಕೆರೆಯ ಬಗ್ಗೆ

೩೭೨. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ತಾಲ್ಲೂಕು ಹಾಗರಗುಂಡಗಿ ಕೆರೆಯನ್ನು ಕಟ್ಟಲಾಂ ಯಾವಾಗ ಪ್ರಾರಂಭ ಮಾಡಲಾಯಿತು ?

ಆ) ಸದರೀ ಕೆರೆಯ ಕಾಮಗಾರಿ ಕೆಲಸಕ್ಕೆ ಮೊದಲು ಅಂದಾಜು ಮಾಡಿದ ಹಣವೆಷ್ಟು? ಮತ್ತು ಕೆಲಸ ಪೂರ್ಣಗೊಂಡಿದೆಯೇ ?

ಇ) ಹಾಗಿದ್ದಲ್ಲಿ, ಸದರೀ ಕೆರೆಯಿಂದ ಎಷ್ಟು ಕರೆ ಜಮೀನು ನೀರಾವರಿ ಆಗುತ್ತಿದೆ ?